ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	1175
ಮಾನ್ಯ ಸದಸ್ಯರ ಹೆಸರು	:	ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	23.12.2021
ಉತ್ತರಿಸುವ ಸಚಿವರು	:	ಕಾರ್ಮಿಕ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಗಾರ್ಮೆಂಟ್ಸ್ ಕಾರ್ಮಿಕರ 2020 ರ ತುಟ್ಟಿಭತ್ಯೆಯು ಏರಿಕೆ ಆಗಿದೆಯೇ;	ಹೌದು, 2019ನೇ ಸಾಲಿಗೆ ಗ್ರಾಹಕ ಬೆಲೆ ಸೂಚ್ಯಾಂಕದ ಅನುಸಾರ ರೂ 417.60 ವ್ಯತ್ಯಸ್ಥ ತುಟ್ಟಿಭತ್ಯೆ ಏರಿಕೆಯಾಗಿರುತ್ತದೆ.
ಆ)	ಕರೋನಾ ಕಾರಣದಿಂದ ಕಾರ್ಮಿಕರ ತುಟ್ಟಿಭತ್ಯೆಗಳನ್ನು ತಡೆಹಿಡಿಯಲಾಗಿದೆಯೇ; ತಡೆಹಿಡಿಯಲಾದ ತುಟ್ಟಿಭತ್ಯೆ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಕರೋನಾ ಹಿನ್ನೆಲೆಯಲ್ಲಿ ಸರ್ಕಾರವು 2020–21ನೇ ಸಾಲಿಗೆ ಪಾವತಿಸಬೇಕಾದ ವ್ಯತ್ಯಸ್ಥ ತುಟ್ಟಿಭತ್ಯೆಯನ್ನು ಮುಂದೂಡಿ ದಿನಾಂಕ: 20.07.2020 ರಂದು ಆದೇಶಿಸಿರುತ್ತದೆ. ಸದರಿ ಆದೇಶವನ್ನು ವಿವಿಧ ಕಾರ್ಮಿಕ ಸಂಘಟನೆಗಳು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಈ ಸಂಬಂಧ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:11.09.2020 ರಂದು ಸದರಿ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ, ಪ್ರಸ್ತುತ ಸದರಿ ಪ್ರಕರಣವು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಸಂಖ್ಯೆ: ಕಾಇ 116 ಎಲ್ ಡಬ್ಲ್ಯೂಎ 2021

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಸಚಿವರು